SRI MALLIKARJUNA KHARGE.—The K.S.R.T.C. has requested the Government to acquire the land two years ago. In spite of that the Assistant Commissioner is delaying it. May I know the reasons for that ? In two or three cases, the Assistant Commissioner has don like that. What action is Government taking against the Officer ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಏತಕ್ಕೆ ವಿಳಂಬ ಆಗಿದೆಯೆಂಬುದನ್ನು ವಿಚಾರ ಮಾಡುತ್ತೇನೆ. ಅಸಿಸ್ಟೆಂಟ್ ಕಮಿಷನರ್ ಅವರಲ್ಲಿ ವಿಳಂಬ ಏಕೆ ಆಗಿದೆಯೆಂಬುದನ್ನು ನೇರವಾಗಿ ತಿಳಿಯುತ್ತೇನೆ. ತಿಳಿದು ನಾನು ಸೂಕ್ತಕ್ರಮವನ್ನು ತೆಗೆದುಕೊಳ್ಳುತ್ತೇನೆ.

Preparation of List of Taluks Affected by Famine

926. SRI A. NANJAPPA (ARASIKERE).—Will the Minister for Revenue be pleased to state—

(*a*) whether it has come to the notice of the Government that though in Arasikere Taluk average rainfall of 20 to 24 inches is expected the famine conditions frequently prevail due to untimely rainfall and failure of crops every year ;

(*b*) whether the Government has prepared the lists of taluks in the State frequently affected by famine ;

(*c*) if so, whether the Arasikere taluk is included in such list ;

(*d*) if not, whether it will be included now ?

SRI N. HUTCHAMASTHY GOWDA (Minister for Revenue) —

(*a*) This taluk is not affected by famine conditions every year. There is a good rainfall during last three years and damage has not been caused to the crops.

(*b*) Lists of such taluks have been prepared.

(*c*) No.

(*d*) At present this question does not arise.

ಶ್ರೀ ಅನಿವಾಳದ ನಂಜಪ್ಪ.—ನನ್ನ (ಸ) ಪ್ರಶ್ನೆಗೆ ಕೊಟ್ಟಿರುವ ಉತ್ತರ ಸತ್ಯಕ್ಕೆ ದೂರವಾಗಿದೆಯೆಂದು ಹೇಳಬಹುದು. ಮಾನ್ಯ ಮಂತ್ರಿಗಳು ಮಂತ್ರಿಯಾಗಿ ಬೆಂಗಳೂರಿಗೆ ಬಂದಮೇಲೆ ಕ್ಷಾಮದ ಅರಿವು ಅವರಿಗಲ್ಲದಂತಾಗಿದೆ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ೧೯೫೨ನೇ ಇಸವಿಯಿಂದ ಇಲ್ಲಿಯವರೆಗೆ ೮ ಸಾರಿ ಅಲ್ಪಾವಧಿ, ಮಧ್ಯಮಾವಧಿ ಸಾಲವನ್ನು ಜನರು ಪಡೆದಿದ್ದಾರೆ ಕ್ಷಾಮದ ಹಾವಳಿ ಪ್ರತಿವರ್ಷವೂ ಮುಂದಕ್ಕೆ ಹೋಗುತ್ತಿರುವ ಅಂಶ ಅಲ್ಲಿದೆ ಹೀಗಿದ್ದರೂ ಕೂಡ ಅಲ್ಲಿನ ೫ ಹೋಬಳಿಗಳಲ್ಲಿ ಎರಡು ಮೂರು ಹೋಬಳಿಗಳಲ್ಲಿ ಸತತವಾಗಿ ಪ್ರತಿವರ್ಷವೂ ಕ್ಷಾಮ ಬರುತ್ತಿರುವುದರಿಂದ ನನ್ನ ಕ್ಷೇತ್ರದಲ್ಲಿ ಕಳೆದ ೨೦ ವರ್ಷಗಳಿಂದಲೂ ಕ್ಷಾಮ ಇದ್ದೇ ಇದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಕೊಟ್ಟಿರುವ ಉತ್ತರ ಪ್ರಶ್ನೆಗನುಗುಣವಾಗಿದೆ. ಮಾನ್ಯ ಸದಸ್ಯರು ಕೇಳಿರುವುದು ಪ್ರತಿ ತಾಲ್ಲೂಕಿನಲ್ಲಿ ಪ್ರತಿವರ್ಷ ಕ್ಷಾಮದ ಪರಿಸ್ಥಿತಿಯೆನ್ನು ಕುರಿತು ಕೇಳಿದ್ದಾರೆ ಪ್ರತಿವರ್ಷ ಆ ರೀತಿ ಇಲ್ಲವೆಂದು ಹೇಳಿದ್ದೇನೆ. ಕಳೆದ ೩ ವರ್ಷಗಳಿಂದ ಅಲ್ಲಿ ಬೆಳೆ ಚೆನ್ನಾಗಿ ಆಗಿದೆಯೆಂದೂ ಹೇಳಿದ್ದಾರೆ. ಪ್ರಶ್ನೆಗೆ ಸರಿಯಾಗಿ ಉತ್ತರ ಇಲ್ಲ, ನನ್ನ ಉತ್ತರದಲ್ಲಿ ಸತ್ಯಾಂಶವಿಲ್ಲವೆಂದು ಹೇಳಿದ್ದಾರೆ. ಹಿಂದೆ ೧೯೬೬-೬೭, ೧೯೭೨-೭೫, ೧೯೭೫ ಕ್ಕೆ ಮತ್ತು ೧೯೭೦-೭೧ರಲ್ಲಿ ರಾಜ್ಯದ ಬಹು ಭಾಗಗಳಲ್ಲಿ ೫ ವರ್ಷಗಳಿಂದಲೂ ಕ್ಷಾಮ ಪರಿಸ್ಥಿತಿ ಇತ್ತು. ಆಗಿಂದಾಗ್ಗೆ ಕ್ಷಾಮ ಎಲ್ಲೆಲ್ಲಿಯೂ ವಿಶೇಷವಾಗಿ ಕಂಡುಬರುತ್ತಿತ್ತು. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ ಇದು ಸರಿಯಾದುದಲ್ಲ. ಆ ಪಟ್ಟಿಯಲ್ಲಿ ಇದು ಸೇರುವುದಕ್ಕೆ ಸರಿಯಾದಂಥ ಅಂಶ ಆಗಿಲ್ಲವೆಂದು ನನ್ನ ಉತ್ತರ.

ಶ್ರೀ ಅನಿವಾಳದ ನಂಜಪ್ಪ.—ಉತ್ತರವನ್ನು ಸಮರ್ಪಕವಾಗಿ ಕೊಟ್ಟಿದ್ದೇನೆಂದು ಅವರು ಹೇಳಿದ್ದಾರೆ ಈ ತಾಲ್ಲೂಕಿನಲ್ಲಿ ೨೦ ರಿಂದ ೨೪ ಇಂಚು ಮಳೆಯಾಗುತ್ತಿದೆ. ಆದರೂ ಬೆಳೆ ಸರಿಯಾಗಿ ಬರುತ್ತಿಲ್ಲ. ಆದ್ದರಿಂದ ಕ್ಷಾಮ ಪರಿಹಾರಕ್ಕೋಸ್ಕರ ಸುಮಾರು ೮–೧೦ ವರ್ಷಗಳ ಕಾಲ ನಮ್ಮ ಕಡೆಯಿಂದ ಸತತವಾಗಿ ಕ್ಷಾಮ ಪರಿಹಾರ ನಿಧಿಯನ್ನು ಒದಗಿಸಿಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಳೆದ ಮೂರು ವರ್ಷಗಳಲ್ಲಿ ಮಳೆಯಾಗಿರುವ ರೀತಿ ಹೇಗೆ ಇದೆಯೆಂದರೆ ೧೯೬೯–೭೦ ರಲ್ಲಿ ೬೨.೩ ಇಂಚುಗಳು, ೭೦ರಲ್ಲಿ ೫೪೨.೧ ಇಂಚುಗಳು, ೭೧ರಲ್ಲಿ ೫೮೨.೭ ಇಂಚುಗಳು, ೭೨ ರಲ್ಲಿ, ೬೫೩.೫ ಇಂಚುಗಳು, ೭೩ರಲ್ಲಿ ೬೦೯.೭ ಇಂಚುಗಳು. ೭೪ರಲ್ಲಿ ೬೬೬ ಇಂಚುಗಳು. ಇಷ್ಟು ಮಳೆಯಾಗಿದೆ. ಅದಕ್ಕೆ ಹಿಂದಿನ ವರ್ಷಗಳಲ್ಲಿ ನಾನು ಹೇಳಿದ್ದರಲ್ಲಿ ಕೆಲವು ಭಾಗಗಳಲ್ಲಿ ತೊಂದರೆಯಾಗಿದೆ. ಆದರೆ ಕಳೆದ ೩ ವರ್ಷಗಳಲ್ಲಿ ಬೆಳೆಯಾಗಿದೆ. ನನಗೆ ಬಂದಿರುವ ವರದಿಯನ್ನು ಸಭೆಯ ಮುಂದೆ ಉತ್ತರವಾಗಿಟ್ಟಿದ್ದೇನೆ. ಹಿಂದೆ ಕೆಲವು ವರ್ಷಗಳಲ್ಲಿ ಕಂದಾಯ ಮಾಫಿ ಮಾಡಿರುವುದಾಗಲೀ, ಅಥವಾ ಕಂದಾಯ ವಸೂಲಿ ಮುಂದಕ್ಕೆ ಹಾಕಿರುವುದಾಗಲಿ ಅದರ ಬಗ್ಗೆ ನನ್ನಲ್ಲಿ ವಿವರಗಳಿಲ್ಲ.

ಶ್ರೀ ಕೆ ಎಚ್. ಹನುಮೇಗೌಡ.—ಕಳೆದ ಮೂರು ವರ್ಷಗಳಿಂದ ಅರಸೀಕೆರೆ ತಾಲ್ಲೂಕಿನಲ್ಲಿ ಸಾಕಾ ದಷ್ಟು ಮಳೆಯಾಗಿ ಬೆಳೆ ಸಾಕಷ್ಟು ಬಂದು ಸಂವೃದ್ಧಿಯಾಗಿ ತಾಂಡವಾಡುತ್ತಿದೆ. ಅಧಿಕಾರಿಗಳು ನಿಮಗೆ ಅಂಕಿ ಅಂಶಗಳನ್ನು ಎಲ್ಲಿಯವರೆಗೆ ಇಲ್ಲಿ ಉತ್ತರ ಕೊಡುವುದಕ್ಕೆ ಕೊಡುತ್ತಾರೋ ಅಲ್ಲಿಯವರೆಗೂ ಅಲ್ಲಿನ ಜನಗಳ ಕಷ್ಟವನ್ನು ನೀಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸಕಾಲದಲ್ಲಿ ಮಳೆ ಸರಿಯಾಗಿ ಆಗಿದ್ದರೆ ಕಳೆದ ಎರಡು ಮೂರು ವರ್ಷಗಳಿಂದ ಕುಡಿಯುವುದಕ್ಕೆ ನೀರು ಇಲ್ಲದೆ ರಿಗ್ ಮೆಷಿನ್‌ಗಳನ್ನು ಹಾಕಿದ್ದಾರೆ. ಆದರೂ ಜನಗಳಿಗೆ ಹಾಹಾಕಾರವಾಗುತ್ತಿದೆ ಆದ್ದರಿಂದ ಸತ್ಯಕ್ಕೆ ದೂರವಾದಂಥ ವರದಿಗಳನ್ನು ಕೊಟ್ಟಿರುವ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಅರಸೀಕೆರೆ ತಾಲ್ಲೂಕಿನ ಪ್ರಶ್ನೆ ನಮ್ಮ ಮುಂದೆ ಇರುವುದು. ಅಲ್ಲಿ ತೊಂದರೆಯಾಗಿದೆಯೆಂದು ನನಗೆ ವರದಿ ಬಂದಿಲ್ಲ. ನಾನು ಯಾವಾಗಲೂ ಸಂಬಂಧಪಟ್ಟ ಅಧಿಕಾರಿಗಳು ಕೊಟ್ಟ ವರದಿಯ ಅಂಕಿ ಅಂಶಗಳ ಆಧಾರದ ಮೇಲೆಯೇ ಅವಲಂಬಿಸಿಕೊಂಡು ಉತ್ತರಗಳನ್ನು ಇಲ್ಲಿ ಕೊಡಬೇಕು ಆದರಲ್ಲಿ ಏನಾದರೂ ಅನುಮಾನ ಬಂದರೆ ಮಂತ್ರಿಗಳೇ ನೇರವಾಗಿ ಹೋಗಿ ನೋಡಿಕೊಂಡು ಬರಬಹುದು, ಮಾನ್ಯ ಸದಸ್ಯರು ಅವರ ಜೊತೆಯಲ್ಲಿ ನನ್ನನ್ನು ಕರೆದುಕೊಂಡು ಹೋಗಲಿ. ಅಲ್ಲಿ ಸತ್ಯಾಂಶಕ್ಕೆ ವಿರೋಧವಾಗಿ ಏನಾದರೂ ಅಧಿಕಾರಿಗಳು ನಡೆದಿದ್ದರೆ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗ ಅರಸೀಕೆರೆ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಅಧಿಕಾರಿಗಳ ವರದಿಯ ಆಧಾರದ ಮೇಲೆ ಹೇಳುತ್ತಿದ್ದೇನೆ. ಇದಕ್ಕೆ ವಿರೋಧವಾದ ಪರಿಸ್ಥಿತಿ ಅಲ್ಲಿದೆಯೆಂದು ನನ್ನ ಗಮನಕ್ಕೆ ಬಂತಾಗಲಿಲ್ಲ. ಅದನ್ನು ಈಗ ಮಾನ್ಯ ಸದಸ್ಯರು ಹೇಳಿದ್ದಾರೆ. ಆದು ಏನೆಂಬುದನ್ನು ನಾನು ವಿಚಾರಿಸಿ ಈ ಸಭೆಗೆ ತಿಳಿಸುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ.—ನೀವು ಇದನ್ನು ಯಾವಾಗ ಪರಿಶೀಲನೆಮಾಡುತ್ತೀರಿ ? ಏಕೆಂದರೆ ಜನರ ಪರಿಸ್ಥಿತಿಯ ಬಗ್ಗೆ ಅಲ್ಲಿನ ಅಧಿಕಾರಿಗಳು ಕಣ್ಣುಮುಚ್ಚಿಕೊಂಡು ತಮಗೆ ವರದಿಗಳನ್ನು ಕೊಡುತ್ತಿದ್ದಾರೆ. ಆದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಉಪಯೋಗಿಸುವ ಪದಗಳನ್ನು ಮತ್ತು ಅವರ ಶಬ್ದವನ್ನು ಕಡಿಮೆ ಮಾಡಿದ್ದರೆ ನಾನು ನಿಜವಾಗಿಯೂ ಉತ್ತರ ಕೊಡುವುದಕ್ಕಾಗುವುದಿಲ್ಲ. ಮೊನ್ನೆ ಒಂದು ತರಹ ಶಬ್ದಗಳು, ಇವತ್ತು ಒಂದು ತರಹ. ಏನೋ ಒಂದು ರೀತಿಯಲ್ಲಿ ಶಾಪ ಹಾಕುವ ಹಾಗೆ ಮಾತನಾಡುತ್ತಿದ್ದರೆ ಹೇಗೆ ?

ಅಧ್ಯಕ್ಷರು.— ಮಾನ್ಯ ಶ್ರೀ ಹನುಮೇಗೌಡರು ಶಾಪ ಹಾಕುತ್ತಾರೆಯೇ ? ಆದರೆ ಇಲ್ಲಿ ಮಿನಿಸ್ಟರ್ ಇಲ್ಲ.

ಶ್ರೀ ಹೆಚ್.ಡಿ ದೇವೇಗೌಡ.—ಅವರಿಗೆ ಶೃಂಗೇರಿ ಜಗದ್ಗುರುಗಳ ಆಶೀರ್ವಾದವಿದೆ. ಆದ್ದರಿಂದ ಇವರ ಶಾಪ ಅವರಿಗೆ ತಟ್ಟುವುದಿಲ್ಲ.

ಶ್ರೀ ಅನಿವಾಳದ ನಂಜಪ್ಪ —ಆಗಿಂದಾಗ್ಗೆ ಈ ತಾಲ್ಲೂಕಿನಲ್ಲಿ ಕ್ಷಾಮ ಬರುತ್ತಿದೆಯೆಂದು ಒಪ್ಪಿಕೊಂಡಿದ್ದಾರೆ. ೫೯ ರಿಂದ ೭೦ ರವರೆಗೆ ಮಳೆ ಕಡಿಮೆಯಾಗಿದೆ, ಬೆಳೆ ಕಡಿಮೆಯಾಗಿದೆಯೆಂದು ಹೇಳಿದ್ದಾರೆ. ಹಿಂದಿನ ವರ್ಷಗಳದೂ ನನ್ನ ಹತ್ತಿರ ರಿಟನ್ ಡಾಕ್ಯುಮೆಂಟ್ಸ್ ಇವೆ. ಮಳೆ ಹೋಗಿ ಕ್ಷಾಮ ಬಂದೂ ಪರಿಹಾರನಿಧಿಯನ್ನು ನಾವು ಕೊಟ್ಟಿದ್ದೇವೆ ಆದ್ದರಿಂದ ಇಬ್ಬಿಲ್ಲವನ್ನೂ ಪರಿಶೀಲನೆ ಮಾಡಿ ಮಾನ್ಯ ಮಂತ್ರಿಗಳು ರೈತರ ಮಕ್ಕಳಾಗಿರುವುದರಿಂದ ಈಗಲಾದರೂ ಅರಸೀಕೆರೆ ತಾಲ್ಲೂಕ್ ಒಂದನ್ನು ಆ ಪಟ್ಟಿಗೆ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಡೀ ಸಂಸ್ಥಾನದಲ್ಲಿ ಡ್ರಾಟ್ ಏರಿಯಾಗಳನ್ನು ನಿಗದಿ ಮಾಡಿರುವಂತೆ ಈಗ ನಮ್ಮ ರಾಜ್ಯದಲ್ಲಿ ೪೭ ತಾಲ್ಲೂಕುಗಳನ್ನು ಆ ಪಟ್ಟಿಯಲ್ಲಿ ಸೇರಿಸಿದ್ದೇವೆ. ಮೊದಲು ೪೨ ತಾಲ್ಲೂಕುಗಳಿದ್ದುವು. ಈಗ ಬಿಜಾಪುರದ ನಾಲ್ಕು ತಾಲ್ಲೂಕುಗಳನ್ನು ಸೇರಿಸಿದ ಮೇಲೆ ಆ ಪಟ್ಟಿಯಲ್ಲಿ ಈಗ ೪೭ ತಾಲ್ಲೂಕುಗಳಾಂ ಕ್ಷಾವಮಕ್ಕೆ ಒಳಗಾಗುವ ತಾಲ್ಲೂಕ್‌ಗಳೆಂದು ಪರಿಗಣಿಸಲಾಗಿದೆ. ಇನ್ನು ಯಾವ್ಯಾವ ತಾಲ್ಲೂಕ್‌ಗಳನ್ನು ಆ ಪಟ್ಟಿಯಲ್ಲಿ ಸೇರಿಸಬೇಕೋ ಆ ಅಂಶವನ್ನು ಗಮನಕ್ಕೆ ತೆಗೆದುಕೊಂಡು ಆ ಪಟ್ಟಿಯಂನ್ನು ಮಾಡಿದ್ದೇವೆ. ಸರ್ಕಾರದವರು ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಅಂತಹ ಪರಿಸ್ಥಿತಿ ಇದೆಯೆಂದು ಹೇಳಿ ಅವನ್ನು ಇನ್ನೂ ವಿಚಾರಿಸಬೇಕೆಂದು ತಿಳಿಸಿದ್ದಾರೆ. ಆದ್ದರಿಂದ ಈ ತಾಲ್ಲೂಕ್ ಸಹ ಆ ಪಟ್ಟಿಯಲ್ಲಿ ಸೇರಿಸುವುದಕ್ಕೆ ಅನುಗುಣವಾಗಿದ್ದರೆ, ಅದನ್ನು ಸೇರಿಸುವುದಕ್ಕೆ ಪ್ರಯತ್ನಮಾಡುತ್ತೇನೆ.

Sheep Rearing Development Centre in Gulbarga District.

931. SRI RAJA PID NAIK (Shorapur).—

Will the Minister of State for Animal Husbandry be pleased to state.

(*a*) whether the Government has any proposal to establish Sheep Rearing Development Centre at Gulbarga District as there is lot of forest wealth and the place is suitable for Sheep Rearing and Sheep Breeding ;

(*b*) if so, the steps taken to implement the proposal ?

SRI DEVENDRAPPA GHALAPPA (Minister of State for Animal Husbandry).—

(*a*) No.

(*b*) Does not arise.

SRI RAJA PID NAIK.—Whether the Government is aware that a large number of sheeps are being read by the agriculturists in this area ; if so, would not sheep breeding farm run an modern lines improve the breed and also improve the economic conditions of these people ?

† SRI DEVENDRAPPA GHALAPPA.—A Sheep and Wool Development Centre exists at Yadgiri of Gulbarga District. The scheme has 8 Extension Centres with 56 rams. The main activity of this scheme is to make available rams to sheep breeders free of cost during breeding season and to provide necessary help in this regard. There is no proposal to start any mere sheep breeding centers in Gulbarga District.

SRI RAJA PID NAIK.—Will the Government take action to have more sheeps rearing development centres in view of the circumstances existing there ?

SRI DEVENDRAPPA GHALAPPA.—This question may be examined.